**ಸಿ.ಸಿ.ನಂ.9125/2022**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 17-07-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಆರೋಪಿ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ನಾನು ನೋಡಿ ಸುಮಾರು 15 ವರ್ಷಗಳಾಗಿದ್ದು ನಂತರ ಅವರಿಗೂ ನಮಗೂ ಯಾವುದೇ ಸಂಪರ್ಕ ಇರಲಿಲ್ಲ.

2016 ರಲ್ಲಿ ನನ್ನ ಮಗ ಕ್ರೆಸೆಂಟ್ ರಸ್ತೆಯಲ್ಲಿರುವ ಪ್ಲಾಟ್ ಅನ್ನು ಖರೀದಿ ಮಾಡಿರುತ್ತಾರೆ. ನನ್ನ ಮಗ ಅಮೇರಿಕಾದಲ್ಲಿದ್ದು ಇಲ್ಲಿಗೆ ಬಂದಾಗ ನಮ್ಮ ಒಟ್ಟಿಗೆ ವಾಸವಿರುತ್ತಾರೆ. ನನ್ನ ಮಗ ಸುಮಾರು 18 ವರ್ಷಗಳಿಂದ ಅಮೇರಿಕಾದಲ್ಲಿದ್ದಾರೆ. ಷಡಕ್ಷರಿ ಸ್ವಾಮಿಯವರು ಸದರಿ ಪ್ಲಾಟ್ ನಲ್ಲಿ ಕಚೇರಿ ಮಾಡಿಕೊಂಡು ಇರಲು ನನ್ನನ್ನು ಕೋರಿದ್ದು ನಾನು ಇರಲು ಅನುಮತಿ ಕೊಟ್ಟಿದ್ದೆನು. ಸದರಿ ಪ್ಲಾಟನ್ನು ಖರೀದಿ ಮಾಡಿದ ನಂತರ ಗೃಹಪ್ರವೇಶವನ್ನು ಸದರಿ ಷಡಕ್ಷರಿ ಸ್ವಾಮಿಯವರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ಅವರು ಸೇರಿ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಪ್ಲಾಟ್ ನಲ್ಲಿ ಷಡಕ್ಷರಿ ಸ್ವಾಮಿಯವರು ಕಚೇರಿ ಪ್ರಾರಂಭಿಸುವ ಮೊದಲು ಬೇರೆ ಕಡೆ ಕಚೇರಿ ನಡೆಸುತ್ತಿದ್ದರು. ಸದರಿ ಷಡಕ್ಷರಿ ಸ್ವಾಮಿಯವರು ಸದರಿ ಪ್ಲಾಟ್ ನಲ್ಲಿ ಅವರಿಗೆ ಬೇಕಾದ ರೀತಿಯಲ್ಲಿ ಇಂಟಿರಿಯರ್ ಮಾಡಿಸಿಕೊಂಡಿರುತ್ತಾರೆ. ಆರೋಪಿ ಷಡಕ್ಷರಿ ಸ್ವಾಮಿಯವರ ಪತ್ನಿ ಎಂದರೆ ಸರಿ. ಷಡಕ್ಷರಿ ಸ್ವಾಮಿಯವರು ಆರ್ಟಿಟೆಕ್ ಕಚೇರಿ ನಡೆಸುತ್ತಿದ್ದರು. ಅವರು ಕಚೇರಿ ಪ್ರಾರಂಭಿಸಿದ ನಂತರ ನಾನು ಸದರಿ ಪ್ಲಾಟ್ ಗೆ ಹೋಗಿರುವುದಿಲ್ಲ. ಷಡಕ್ಷರಿ ಸ್ವಾಮಿಯವರು ತೀರಿಕೊಂಡ ನಂತರ 2021 ನೇ ಆಗಸ್ಟ್ 1 ನೇ ತಾರೀಖಿನಂದು

ಸದರಿ ಅಪಾರ್ಟ್‌ಮೆಂಟನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿಗಳು ಕರೆ ಮಾಡಿ ನಮ್ಮ ಪ್ಲಾಟ್ ನಲ್ಲಿ ನೀರು ಸೋರಿಕೆಯಾಗುತ್ತಿದ್ದ ಬಗ್ಗೆ ತಿಳಿಸಿದ್ದು ಆಗ ನಾವು ಹೋಗಿ ನೋಡಿರುತ್ತೇವೆ. ಆ ಸಮಯದಲ್ಲಿ ನನ್ನ ಮಗ ಅಮೇರಿಕಾದಲ್ಲಿದ್ದರು. 2021 ನೇ ಆಗಸ್ಟ್ 1 ನೇ ತಾರೀಖಿನಂದು ನಾನು ಮತ್ತು ನನ್ನ ಗಂಡ ಹೋದಾಗ ಸದರಿ ಪ್ಲಾಟ್ ನ ಅಸೋಸಿಯೇಷನ್ ರವರು ಮತ್ತು ಪ್ಲಂಬಿಂಗ್ ಕೆಲಸ ಮಾಡುವವರು ಇದ್ದರು. ನಾವು ಹೋದ ಸಮಯದಲ್ಲಿ ಷಡಕ್ಷರಿ ಸ್ವಾಮಿಯವರು ಹಾಕಿದ್ದ ಬೀಗ ಹಾಗೇ ಇತ್ತು ಎಂದರೆ ಸಾಕ್ಷಿ ಅದನ್ನು ಒಡೆದು ಬೇರೆ ಬೀಗ ಹಾಕಿದ್ದರು ಎಂದು ಉತ್ತರಿಸುತ್ತಾರೆ. ಷಡಕ್ಷರಿ ಸ್ವಾಮಿಯವರು ತೀರಿಕೊಂಡ ನಂತರ ಅವರ ಪತ್ನಿ ಅಥವಾ ಮಕ್ಕಳಿಗೆ ನಮ್ಮ ಪ್ಲಾಟ್ ನಲ್ಲಿದ್ದ ವಸ್ತುಗಳನ್ನು ತೆಗೆದುಕೊಂಡು ಹೋಗಿ ಎಂದು ನಾವು ತಿಳಿಸಿರುವುದಿಲ್ಲ. ಷಡಕ್ಷರಿ ಸ್ವಾಮಿಯವರು ನಮ್ಮ ಪ್ಲಾಟನ್ನು ಖರೀದಿ ಮಾಡಲು ಹಣಕಾಸಿನ ಸಹಾಯ ಮಾಡಿದ್ದು ಅವರೇ ಮಾಲೀಕರಾಗಿ ಅದರಲ್ಲಿ ಇದ್ದು ಅವರು ತೀರಿಕೊಂಡ ನಂತರ ಅವರ ಹೆಂಡತಿ ಅಥವಾ ಮಕ್ಕಳಿಗೆ ಖಾಲಿ ಮಾಡುವಂತೆ ನಾವು ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ಪ್ಲಾಟ್ ಗೆ ಷಡಕ್ಷರಿ ಸ್ವಾಮಿಯವರು ಮಾಲೀಕರಾಗಿದ್ದು ಅವರು ತೀರಿಕೊಂಡ ನಂತರ ಆರೋಪಿ ತಾವೇ ಮಾಲೀಕರೆಂದು ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿದ್ದು ಅದರ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.

ನಾವು ಅಪಾರ್ಟ್ ಮೆಂಟ್ ಗೆ ಹೋದಾಗ ಆರೋಪಿ ಯಾವುದೇ ಸಮಯದಲ್ಲಿ ಅಲ್ಲಿ ಇರಲಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಬಂದು ಷಡಕ್ಷರಿ ಸ್ವಾಮಿಯವರ ಅಣ್ಣನ ಮಗ ಎಂದು ಕಾವಲುಗಾರರಿಗೆ ಹೇಳಿದ್ದು ಸದರಿ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಆಗ ಕಾವಲುಗಾರರು ಅವರ ನಂಬರನ್ನು ಕೊಟ್ಟಿದ್ದು ನಾವು ಕರೆ ಮಾಡಿ ವಿಚಾರಿಸಿದಾಗ ಆರೋಪಿ ಬಾಡಿಗೆಗೆ ಕೊಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ಪ್ಲಾಟ್ ಷಡಕ್ಷರಿ

ಸ್ವಾಮಿಯವರ ಮಾಲೀಕತ್ವಕ್ಕೆ ಸೇರಿದ್ದು ಅವರು ತೀರಿಕೊಂಡ ನಂತರ ಅವರ ಪತ್ನಿ ಆರೋಪಿಗೆ ಬಂದಿದ್ದು ಅದನ್ನು ಅವರು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಾವು ಆಗಸ್ಟ್ 1 ರಂದು ಪ್ಲಾಟ್ ಗೆ ಹೋಗಿ ನೋಡಿ ತಕ್ಷಣ ದೂರು ಕೊಟ್ಟಿರುವುದಿಲ್ಲ. ಆರೋಪಿ ನಮ್ಮ ಪ್ಲಾಟ್ ನಲ್ಲಿ ಇರಲು ಸಂತೋಷ್ ಶೆಟ್ಟಿ ಮತ್ತು ಭರತ್ ಶೆಟ್ಟಿ ರವರಿಗೆ ಬಾಡಿಗೆಗೆ ಕೊಟ್ಟಿರುವ ಬಗ್ಗೆ ನಮಗೆ ಫೋನ್ ಮೂಲಕ ತಿಳಿಸಿರುತ್ತಾರೆ. ದೂರು ಕೊಡುವ ಸಮಯದಲ್ಲಿ ಸದರಿ ಸಂತೋಷ್ ಶೆಟ್ಟಿ ಮತ್ತು ಭರತ್ ಶೆಟ್ಟಿ ರವರನ್ನು ನೋಡಿರುತ್ತೇವೆ. ಆರೋಪಿ ಗಂಡ ಸದರಿ ಪ್ಲಾಟ್ ಗೆ ಮಾಲೀಕರಾಗಿದ್ದು ಅದೇ ಹಕ್ಕಿನಡಿಯಲ್ಲಿ ಆರೋಪಿ ಬೇರೆಯವರಿಗೆ ಬಾಡಿಗೆಗೆ ಕೊಟ್ಟಿದ್ದು ಮೋಸಮಾಡುವ ಉದ್ದೇಶದಿಂದ ಬಾಡಿಗೆಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ ಒ**

**8 ನೇ ಅ. ಮು. ಮ. ದಂ. ನ್ಯಾ.**